## ನಟರನ್ನೂ ತಿದ್ದಲಿ

‘ಜಾಣರ ಪೆಟ್ಟಿಗೆ’ ನಿಜವಾಗಿಯೂ ನಮ್ಮ ಟೀವಿಗಳು ಗುಣಮಟ್ಟ ಹೆಚ್ಚಿಸಿಕೊಳ್ಳಲು ಒಳ್ಳೆಯ ಮಾಧ್ಯಮವಾಗಿದೆ. ಈ ಬಾರಿ ಡಿಸೆಂಬರ್ 9ನೇ ತಾರೀಖಿನ ಸಂಚಿಕೆಯ ಒಂದೊಂದೂ ಬರಹವೂ ವಾಹಿನಿಗಳಿಗೆ ಕನ್ನಡಿ ಹಿಡಿದಂತಿದೆ.

ಇಲ್ಲಿ ‘ಕನ್ನಡಿತಿ’ ಮೊದಲಿನ ಸೊಗಡು ಉಳಿಸಿಕೊಂಡಿಲ್ಲ. ಕಡೆಯಲ್ಲಿ ಕನ್ನಡ ಪದಗಳ ಪರಿಚಯ ಕೂಡ. ಮೊದಲಿನ ಲವಲವಿಕೆ ಉಳಿಸಿಕೊಂಡಿಲ್ಲ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಪೊಲೀಸರ ಗಡ್ಡ

ಪೊಲೀಸರು ಮೀಸೆ ಬೆಳೆಸಬಹುದು. ಸಿಖ್ ಸಮುದಾಯದವರನ್ನು ಹೊರತುಪಡಿಸಿ ಉಳಿದ ಪೊಲೀಸರು ಗಡ್ಡ ಬಿಡುವಂತಿಲ್ಲ.

ಇದು ಪೊಲೀಸ್ ನಿಯಮಾವಳಿ. ವಿಪರ್ಯಾಸವೆಂದರೆ ‘ಮಂಗಳ ಗೌರಿ’ ಮದುವೆಯ ಎಸ್.ಪಿ. ರಾಜೀವ ಪಾತ್ರಧಾರಿ ಗಡ್ಡ ಬಿಟ್ಟಿರುವುದಲ್ಲದೆ ಪಡ್ಡೆ ಹುಡುಗರಂತೆ ಕೇಶವಿನ್ಯಾಸ ಮಾಡಿಕೊಂಡಿದ್ದಾನೆ.

ಐಪಿಎಸ್ ಅಧಿಕಾರಿಯ ಪಾತ್ರವನ್ನು ಸೃಷ್ಟಿಸಲು ಹೊರಟ ನಿರ್ದೇಶಕರು ಕನಿಷ್ಠ ಪಕ್ಷ ಓರ್ವ ಪೊಲೀಸ್ ಪೇದೆಯನ್ನಾದರೂ ಸೂಕ್ಷ್ಮವಾಗಿ ಗಮನಿಸದೆ ನಿರ್ದೇಶನ ಮಾಡಿದರೆ ಇಂತಹ ಪಾತ್ರಗಳು ಸೃಷ್ಟಿಯಾಗುತ್ತವೆ.

—ಪಿ.ಜೆ.ರಾಘವೇಂದ್ರ, ಮೈಸೂರು

## ಕಥಾನಾಯಕ ಕಾಣೆ!

ಸ್ಟಾರ್ ಸುವರ್ಣದ ‘ಎಡೆಯೂರು ಶ್ರೀ ಸಿದ್ದಲಿಂಗೇಶ್ವರ’ ನೋಡಿದಾಗ, ಒಂದು ತಟ್ಟೆ ಅನ್ನಕ್ಕೆ ಒಂದು ಉಪ್ಪಿನಕಾಯಿ ಸಾಕು? ಒಂದು ತಟ್ಟೆ ಉಪ್ಪಿನಕಾಯಿಗೆ ಒಂದು ತುತ್ತು ಅನ್ನ ಉಣ್ಣಲು ಅಸಾಧ್ಯ ಅಲ್ಲವೇ? ಎಂದೆನಿಸಿತು. ಒಟ್ಟು 18–20 ನಿಮಿಷದ ಒಂದು ಸಂಚಿಕೆಯಲ್ಲಿ 5 ನಿಮಿಷವೂ ಆ ಮಹಾಪುರುಷನ ಮುಖ ಕಾಣಲು ಸಿಗುವುದಿಲ್ಲ. ಹೆಂಡ ಕುಡಿಯುವ, ವಿಷಯ ಲಂಪಟ, ಸೊಸೆಯನ್ನು ಪೀಡಿಸುವ ಅತ್ತೆ–ನಾದಿನಿ, ಅಪ್ಪ–ಅವ್ವನ ಕಣ್ಣು ತಪ್ಪಿಸಿ ಮನೆಯಾಳು ಜೊತೆ ಸರಸ ಆಡುವ ಮಗಳು ಇವೆಲ್ಲ ಯಾವ ಪುರುಷಾರ್ಥಕ್ಕೆ?

—ಬಸವರಾಜ ಹರಿಹರ, ಧಾರವಾಡ

ವಾರದ ಪತ್ರ

## ಮುಗ್ಧತೆಯೊಳಗಿನ ಪ್ರೌಢತೆ

ಕಲರ್ಸ್ ಕನ್ನಡದ ‘ನನ್ನಮ್ಮ ಸೂಪರ್ ಸ್ಟಾರ್’ನಲ್ಲಿ ಆರ್ಯ ಮತ್ತು ವಂಶಿಕಾ ನಡುವೆ ಸ್ಪರ್ಧೆ ಏರ್ಪಟ್ಟಿತ್ತು. ಚಿತ್ರಕಲೆಯಲ್ಲಿ ವಂಶಿಕಾ ಸಾಧಾರಣ ಅನಿಸಿದರೂ ಸ್ಪರ್ಧೆಯಲ್ಲಿ ಪೈಪೋಟಿ ನೀಡಿದ್ದು ಖುಷಿ ಕೊಟ್ಟಿತು. ಆರ್ಯ ತನ್ನ ಸೋಲನ್ನು ಒಪ್ಪಲು ಕಲಿಯಬೇಕು. ಅವಳಿಗಿಂತ ಚಿಕ್ಕವಳಾದರೂ ವಂಶಿಕಾ ತಾನು ಗೆದ್ದ ಚಾಕೊಲೇಟ್ ಡಬ್ಬವನ್ನು ಅಳುತ್ತಿದ್ದ ಆರ್ಯನಿಗೆ ಕೊಟ್ಟು ‘ಇಬ್ಬರಿಗೂ ಸಿಗಲಿ ಅಂತಾನೇ ನಾನು ಗೆದ್ದಿದ್ದು ತಗೋ’ ಎಂದು ಕೊಟ್ಟಿದ್ದು ಹಿರಿಯರೂ ನಾಚುವಂತಿತ್ತು.

ವಂಶಿಕಾ ಮಾತ್ರ ತಾನೂ ಖುಷಿಪಟ್ಟು ಚಪ್ಪಾಳೆ ತಟ್ಟುತ್ತಾ ಕುಣಿಯುತ್ತಾ ಮಾದರಿ ಆದಳು. ಅವಳೊಳಗಿನ ಮುಗ್ಧತೆಯ ಜೊತೆ ಪ್ರೌಢತೆ ಕಂಡು ಗೌರವ ಮೂಡಿತು. ನಿಜವಾಗಿ ಆಕೆ ದೊಡ್ಡ ವ್ಯಕ್ತಿತ್ವದ ಹೆಸರು ಮಾಡುವಂತೆ ಆಗಲಿ.

—ಗೀತಾ ಎಸ್.ಕೆ. ಹಾಸನ

## ಹಳಿಗೆ ಬಂದ ಕನ್ನಡತಿ

ಕಲರ್ಸ್ ಕನ್ನಡದ ‘ಕನ್ನಡತಿ’ ಮಧ್ಯದಲ್ಲಿ ಸ್ವಲ್ಪ ಹಳಿ ತಪ್ಪಿತ್ತು. ಈಗ ಮತ್ತೆ ಹಿಡಿತಕ್ಕೆ ಬಂದಿದೆ. ಕೆಲವರು ಅತ್ತೆ–ಸೊಸೆ ಜಗಳ, ಆಸ್ತಿ ಜಗಳ ಅಂತಾರೆ. ಆದರೆ, ದೇಶದ ನಂ. 1 ಶ್ರೀಮಂತ ಮನೆತನದಲ್ಲೇ ಆಸ್ತಿಗಾಗಿ ಜಗಳ ನಡೆಯುವಾಗ ಕನ್ನಡ ಸೀರಿಯಲ್‌ನಲ್ಲಿ ಇರಬಾರದಾ? ಇನ್ನು ಭುವಿ ಕನ್ನಡ ಅಂತ ಬರೀ ಪಾಠ ಮಾಡುವುದನ್ನೇ ತೋರಿಸುವುದಕ್ಕೆ ಆಗುತ್ತದಾ? ಹಾಗೆ ಹರ್ಷನ ಕಾಫಿ ವ್ಯವಹಾರವನ್ನೇ ತೋರಿಸುತ್ತಾ ಇದ್ದರೆ ನೋಡುವುದಕ್ಕೆ ಆಗುತ್ತದಾ? ಕಥೆಯಲ್ಲಿ ಗೆಳೆತನ, ಪ್ರೀತಿ, ಮಮತೆ, ದ್ವೇಷ, ಸಮಾಧಾನ ಎಲ್ಲವೂ ಇರಬೇಕು. ಅದೇ ರೀತಿ ಕನ್ನಡತಿಯೂ ಇದೆ.



—ಲಕ್ಷ್ಮಿ, ಚಾಮರಾಜನಗರ

## ಇನ್ನೊಂದಿಷ್ಟು ಬದಲಾಗಲಿ

ಕಲರ್ಸ್ ಕನ್ನಡದ ‘ಕನ್ನಡತಿ’ ಮಾರುದ್ದದ ಸಂಭಾಷಣೆಗಳು, ಕಚೇರಿಗೆ ನಿಲುವಂಗಿ ಧರಿಸಿಕೊಂಡು ಹೋಗುವ ಸಾನಿಯಾ ಆಸ್ತಿಗಾಗಿ ಕುತಂತ್ರ ನಡೆಸುವುದು, ಮುಖವನ್ನು ಸಿಂಡರಿಸಿಕೊಳ್ಳುವುದು, ವರೂಧಿನಿಯ ವೇಷಭೂಷಣಗಳು ನೋಡಲು ಮುಜುಗರಪಟ್ಟುಕೊಳ್ಳುವಂತೆ ಇರುವುದು. ಹೇಗಿದ್ದರೂ ಧಾರಾವಾಹಿ ನೋಡುತ್ತಾರೆಂಬ ಭ್ರಮೆಯಲ್ಲಿ ನಿರ್ದೇಶಕರು ಇರುವಂತಿದೆ. ಕಥೆಯನ್ನು ಮಾರ್ಪಡಿಸಿಕೊಂಡು ಅರ್ಥವತ್ತಾದ ಚುರುಕು ಸಂಭಾಷಣೆ ಸೂಕ್ತ ಅಭಿನಯದಿಂದ ಕೂಡಿ ಪ್ರಸಾರ ಮಾಡಿದರೆ ಕನ್ನಡಮ್ಮನ ಮಕ್ಕಳಾದ ನಾವೇ ಧನ್ಯರು.

—ಎಂ.ಟಿ. ರಮಾನಂದ ರೆಡ್ಡಿ, ಮದಕರಿಪುರ

## ಸುದ್ದಿ ಮೌಲ್ಯ ಪಾತಾಳಕ್ಕೆ

‘ಇಡೀ ರಾಜ್ಯ ಖುಷಿ ಪಡೋ ಸುದ್ದಿ– ನಟಿ ಅಮೂಲ್ಯ ಪ್ರೆಗ್ನೆಂಟ್... ಉಲ್ಲಾಸದ ‘ಹೂ ಮಳೆ... ಖುಷಿ ಸುದ್ದಿ, ಸ್ಯಾಂಡಲ್ ವುಡ್ ಅಭಿಮಾನಿಗಳಿಗೆ ಭರ್ಜರಿ ಗುಡ್ ನ್ಯೂಸ್’. ಇದು ಕನ್ನಡದ ಸುದ್ದಿ ವಾಹಿನಿಯೊಂದರ ಮೆಗಾ ಬ್ರೇಕಿಂಗ್ ನ್ಯೂಸ್ ಶೀರ್ಷಿಕೆ.

ಇದು ಸುದ್ದಿ ಕೊರತೆಯ ದ್ಯೋತಕವೋ ಅಥವಾ ಸುದ್ದಿ ಮೌಲ್ಯದ ಪ್ರತಿಫಲವೋ? ಸುದ್ದಿ ಮಾಧ್ಯಮಗಳಿಗೂ ಚಂದನವನಕ್ಕೂ ಅವಿನಾಭಾವ ಸಂಬಂಧ ಇದೆ. ಆದರೆ, ಅವರ ವೈಯಕ್ತಿಕ ಜೀವನದ ಸಹಜ ಘಟನೆಗಳು ಈ ರೀತಿ ಬ್ರೇಕಿಂಗ್ ನ್ಯೂಸ್ ಆಗಿರುವುದು ಆಶ್ಚರ್ಯ.

ಈ ಸಂಗತಿ ಸಾಮಾಜಿಕ ಜಾಲತಾಣದಲ್ಲಿ ಟ್ರೋಲ್ ಆಗಿ ನಗೆಪಾಟಲಿಗೀಡಾಗಿದೆ. ಈ ಸುದ್ದಿಯನ್ನು ಪ್ರಸಾರಮಾಡುವ ಅನಿವಾರ್ಯತೆ ಇದ್ದರೆ ಅದನ್ನು ಸೂಕ್ಷ್ಮವಾಗಿ ಮಾಡಬಹುದಿತ್ತು.

—ರಮಾನಂದ ಶರ್ಮಾ, ನವದೆಹಲಿ

## ಯಾವುದು ಸಂಭ್ರಮ

ಚಿತ್ರ ನಟಿ ಗರ್ಭಿಣಿಯಾದರೆ ಅದು ‘ಇಡೀ ರಾಜ್ಯವೇ ಖುಷಿ ಪಡೊ ವಿಷಯ’– ಹೇಗಿದೆ ನೋಡಿ ನಮ್ಮ ಸುದ್ದಿ ವಾಹಿನಿಯ ‘ಮೆಗಾ ಬ್ರೇಕಿಂಗ್’ ಹಿಂದೆ ಯಾರೂ ಗರ್ಭಿಣಿಯರಾಗೇ ಇರಲಿಲ್ಲ, ಮುಂದೆ ಯಾರೂ ಆಗುವುದೇ ಇಲ್ಲ ಎಂಬಂತಹ ಮಹತ್ತರ ಆಶ್ಚರ್ಯಕರ ಮಾಹಿತಿಗಳನ್ನು ನೀಡುತ್ತಿರುವುದಕ್ಕೆ ನಗಬೇಕೋ ಅಳಬೇಕೋ ತಿಳಿಯುವುದಿಲ್ಲ.

ವೈಪರೀತ್ಯಕ್ಕೆ ಮತ್ತು ‘ಇಲಿ ಹೋದರೆ ಹುಲಿ ಹೋಯಿತು’ ಎಂಬಂತೆ, ಮತ್ತು ಒಂದೇ ಸುದ್ದಿಯ ಬಾಲ ಹಿಡಿದು ನಿರಂತರವಾಗಿ ದಿನವಿಡೀ ಎಳೆಯುವ ವಾಹಿನಿಗಳಿಗೆಲ್ಲ ವಿಷಾದಪೂರ್ವಕ ನಮನಗಳು.

—ಶ್ರೀಧರ್, ಬೆಂಗಳೂರು